ಶ್ರೀ ಕೆ. ಎಚ್. ಶ್ರೀನಿವಾಸ್.—ಯಾವ ಯಾವ ಹಳ್ಳಿಗಳಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಬೇಕು ಎಂದು ಹಿಂದೆ ಒಂದು ಪಟ್ಟಿ ಮಾಡಿರುವುದು ಇದೆ. ಆ ಪಟ್ಟಿಯಲ್ಲಿ ಈ ಹಳ್ಳಿಗಳು ಸೇರಿಲ್ಲ ಆದ್ದರಿಂದ ಇದನ್ನು ಆರ್ ಇ ಪಿ ಪ್ರೋಗ್ರಾಂನಲ್ಲಿ ತೆಗೆದುಕೊಳ್ಳಲಾಗಿದೆ. ಜೊತೆಗೆ ಕೆಲಸನಡೆಯುತ್ತಿದೆ. ಯಾವ ಹಂತದಲ್ಲಿ ಕೆಲಸ ಇದೆ ಎನ್ನುವುದನ್ನು ಬೇಕಾದರೆ ನಾನು ಒದಗಿಸಿಕೊಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ತಾವು ವಿದ್ಯುತ್ತೀಕರಣವನ್ನು ಹಳ್ಳಿಗಳಿಗೆ ಮಾಡುತ್ತೀರಿ ಆ ಊರಿನಲ್ಲಿ ಹರಿಜನರ ಕೇರಿ ಇದ್ದರೆ ಅಲ್ಲಿಗೆ ಈ ಕೆಲಸವನ್ನು ಮಾಡದೆ ಉದಾಶೀನ ಮಾಡುತ್ತಿದ್ದಾರೆ ?

ಶ್ರೀ ಕೆ. ಎಚ್. ಶ್ರೀನಿವಾಸ್.—ನಮ್ಮ ವಿದ್ಯುತ್‌ಚ್ಛಕ್ತಿ ಇಲಾಖೆಯ ನೀತಿ ಪ್ರಕಾರ ಹರಿಜನ ಕೇರಿ ಇದ್ದರೆ ಅಲ್ಲಿ ವಿದ್ಯುತ್ತೀಕರಣ ಮಾಡಬೇಕೆಂದು ಇದೆ. ಆ ರೀತಿ ಏನಾದರೂ ಲೋಪಗಳು ಇದ್ದರೆ ತಿಳಿಸಿದರೆ ಮಾಡಿಸಿಕೊಡುತ್ತೇನೆ.

SRI M. M. NADAF.—Sir, the Hon'ble Minister was pleased to say that there is a previous list prepared by the Department to electrify the villages. I would like to know from the Minister whether they would revise the list by consulting M.L.As, taking the present circumstances into consideration ?

SRI K. H. SRINIVAS.—In fact, I have already asked the office to put up that file for reviewing it. If there is a case for revision I will consider it.

Fire Stations in the State

817. SRI B. N. BACHE GOWDA (Hosakote).—Will the Chief Minister be pleased to state :—

(*a*) the number of Fire Stations working in the State;

(*b*) whether there is any proposal before the Government to start fire stations in all District Headquarters;

(*c*) the number of fire accidents during the year 1977-78 and the relief measures taken;

(*d*) whether there is any proposal to start a fire station at Kolar, if so, the reasons for the delay ?

SRI D. DEVARAJ URS (Chief Minister),—

(*a*) —

(1) District Headquarters	...	17
(2) Municipal Fire Stations, Bombay Karnataka Area	...	14

(*b*) There is a proposal to start fire stations in District Headquarters in a phased programme subject to availability of funds.

(*c*) Fire Calls	...	1201
Serious Fire Accidents	...	45

Cash relief to the victims of fire accidents is being sanctioned by Revenue Authorities as indicated in Government Order No. RDF. 60 TFL 74, dated 30th October 1974.

(*d*) Government have already sanctioned a fire station at Kolar during 1977 and the sanction has been renewed during 1978. The delay in opening the fire station is due to the non-availability of a suitable site and consequent acquisition proceedings etc. The equipments required for the fire station could not be procured in time, but efforts are being made to start working of the fire station at Kolar at a very early date.

ಶ್ರೀ ಬಿ. ಎನ್. ಬಾಚೇಗೌಡ (ಹೊಸಕೋಟೆ).—ಸ್ವಾಮಿ, ತಮ್ಮ ಉತ್ತರದಲ್ಲಿ ಜಿಲ್ಲಾ ಮುಖ್ಯಾಲಯಗಳಲ್ಲಿ ೧೭ ಮತ್ತು ಮುನಿಸಿಪಲ್ ಹಾಗೂ ಪುರಸಭೆಯ ಅಗ್ನಿಶಾಮಕ ನಿಲ್ದಾಣಗಳು ಸೇರಿ ೩೧ ಎಂದು ಹೇಳಿದ್ದೀರಿ ? ಆದರೆ ಜಿಲ್ಲಾ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಎಷ್ಟು ಫೈರ್ ಸ್ಟೇಷನ್‌ಗಳು ಇವೆ ಜೊತೆಗೆ ಈಗಾಗಲೇ ಒಂದು ಕಡೆ ಜಮೀನನ್ನು ಸ್ವಾಧೀನ ಪಡಿಸಿಕೊಂಡಿದ್ದೀರೆಂದು ಕೇಳಿದ್ದೇನೆ ಇದರ ಬಗ್ಗೆ ಏನು ಕಾರ್ಯ ಕ್ರಮ ಹಾಕಿದ್ದೀರಿ ಎಂಬುದನ್ನು ತಿಳಿಸುತ್ತೀರಾ ?

† ಶ್ರೀ ಡಿ. ದೇವರಾಜ್ ಅರಸ್.—ಈಗ ಜಿಲ್ಲಾ ಮುಖ್ಯ ಸ್ಥಳಗಳಲ್ಲಿ ೧೭ ಫೈರ್ ಸ್ಟೇಷನ್‌ಗಳು ಇವೆ. ಇದರಲ್ಲಿ ಬೆಂಗಳೂರು ಸೌತ್, ನಾರ್ಥ್, ಜಯನಗರ, ಹೈಗ್ರೌಂಡ್ಸ್, ಮಲ್ಲೇಶ್ವರಂ, ಮೈಸೂರು ಮಂಗಳೂರು ಉಡುಪಿ ಹೀಗೆ ೧೭ ಇವೆ. ಇನ್ನು ಬಾಂಬೆ ಕರ್ನಾಟಕ ಏರಿಯಾದಲ್ಲಿ ೧೪ ಇದೆ ಎಂದು ತಿಳಿಸಿದ್ದೇನೆ.

ಶ್ರೀ ಬಿ. ಎನ್. ಬಾಚೇಗೌಡ,—ಇನ್ನು ಯಾವ ಸ್ಥಳದಲ್ಲಿ ತೆರೆಯುವ ಉದ್ದೇಶ ಇಟ್ಟುಕೊಂಡಿದ್ದೀರಿ ? ಇನ್ನು ಒಂದು ಕಡೆ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವ ಪ್ರಕಾರ ಅದನ್ನು ಯಾವಾಗ ತೆರೆಯುತ್ತೀರಿ ?

ಶ್ರೀ ಡಿ. ದೇವರಾಜ್ ಅರಸ್.—ಇನ್ನು ಕೋಲಾರ್‌ನಲ್ಲಿ ಮಾಡಬೇಕೆಂದು ಒಂದೂವರೆ ಎಕರೆ ಜಮೀನನ್ನು ತೆಗೆದುಕೊಂಡಿದೆ ಅದು ಸಾಲುವುದಿಲ್ಲ ಅವಕ್ಕೆ ಮೂರುವರೆ ಎಕರೆ ಜಮೀನು ಬೇಕಾಗಿದೆ ಅದನ್ನು ತೆಗೆದುಕೊಂಡು ಮಾಡುತ್ತೇವೆ.

ಶ್ರೀ ಬಿ. ಎನ್. ಬಾಚೇಗೌಡ.—ಬೆಂಕಿ ಪ್ರಕರಣಕ್ಕೆ ಸಂಬಂದಿಸಿದಂತೆ ಬಂದ ಕರೆಗಳು ೧೨೦೧ ಎಂದು ಹೇಳಿದ್ದೀರಿ ಇದರಲ್ಲಿ ಆದ ನಷ್ಟದ ಅಂದಾಜು ಎಷ್ಟು ? ಇದಕ್ಕೆ ಪರಿಹಾರ ರೂಪದಲ್ಲಿ ಎಷ್ಟು ಹಣ ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು,

ಶ್ರೀ ಡಿ. ದೇವರಾಜ್ ಅರಸ್.—೧೨೦೧ರಲ್ಲಿ ಯಾವುದಕ್ಕೆ ಎಷ್ಟು ಕೊಟ್ಟಿದ್ದಾರೆಂದು ನನ್ನಲ್ಲಿ ಲೆಕ್ಕ ಇಲ್ಲ. ನಮಗೆ ೧೨೦೦ ರೂಪಾಯಿ ನಷ್ಟ ಆದರೆ ೬ ನೂರು ರೂಪಾಯಿ ಪರಿಹಾರ ಕೊಡಬೇಕು ಎಂದು ಇದೆ. ೧೨೦೦ರ ಒಳಗೆ ನಷ್ಟ ಆದರೆ ೩೦೦ ರೂಪಾಯಿ ಕೊಡಬಹುದು ಎಂದು ಇದೆ ಆಮೇಲೆ ಮನೆಗಳು ಬಿಲ್ಡಿಂಗ್‌ಗಳು ನಷ್ಟ ಆದರೆ ತಹಸಿಲ್ದಾರ್ ೨೦೦ ರೂಪಾಯಿ ಕೊಡುವ ಅಧಿಕಾರವಿದೆ ಅಸಿಸ್ಟೆಂಟ್ ಕಮೀಷನರ್ ೩೦೦ ರಿಂದ ೫೦೦ ರೂಪಾಯಿಗಳವರೆಗೆ ಮತ್ತು ಡೆಪ್ಯುಟಿ ಕಮೀಷನರ್ ೩೦೦ರೂ. ಗಳಿಂದ ೬೦೦ ರೂಪಾಯಿಗಳವರೆಗೆ ಕೊಡಬಹುದು.

ಶ್ರೀ ಜಿ. ಬಿ. ಶಂಕರರಾವ್.—ಜಿಲ್ಲಾ ಮುಖ್ಯ ಸ್ಥಳಗಳಲ್ಲಿ ೧೭ ಫೈರ್ ಸ್ಟೇಷನ್‌ಗಳು ಇವೆಯೆಂದು ಇನ್ನು ಉಳಿದ ಸ್ಥಳಗಳಲ್ಲಿ ಇಲ್ಲವೆಂದು ಗೊತ್ತಾಗುತ್ತದೆ. ಆದ್ದರಿಂದ ಇನ್ನು ಸಾಕಷ್ಟು ಜಿಲ್ಲಾ ಮುಖ್ಯ ಸ್ಥಳಗಳಲ್ಲಿ ಆದರಲ್ಲೂ ವಿಶೇಷವಾಗಿ ಔದ್ಯೋಗಿಕವಾಗಿರುವ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇದರ ಅವಶ್ಯಕತೆ ಬಹಳ ಇದೆ. ಆದ್ದರಿಂದ ಸರ್ಕಾರದವರು ಆದ್ಯತೆ ಮೇಲೆ ಈ ಔದ್ಯೋಗಿಕವಾಗಿ ಮುಂದುವರಿದ ಜಿಲ್ಲೆಗಳಲ್ಲಿ ಕೇಂದ್ರಗಳಲ್ಲಿ ಇವುಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ನಾವು ಕೂಡ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿದ್ದೇವೆ ಎಂದು ತಿಳಿಸಿದ್ದೇನೆ.